ಬಹಳ ಮುಕ್ತವಾದ ಅಂತ್ಯ ನೀಡುತ್ತಾನೆ ನಿರ್ದೇಶಕ.

ಫರ್ಹಾದಿ ಅವರ ಇತರ ಹಲವು ಸಿನಿಮಾಗಳನ್ನು ಗಮನಿಸಿದರೆ ಮತ್ತು ಅವರ ಶೈಲಿಯನ್ನು ತುಸು ವ್ಯವಸ್ಥಿತವಾಗಿ ಹೀಗೆ ಹಿಡಿಯಲು ಪ್ರಯತ್ನಿಸಬಹುದು: ಅವರು ತಮ್ಮ ಸಿನಿಮಾಗಳ ಕೆಲವು ನಿರ್ಣಾಯಕ ಘಟನೆಗಳನ್ನು ನಿಖರವಾಗಿ ಅಥವಾ ಹೀಗೆ ಇರಬೇಕು ಎಂದು ತೀರ್ಮಾನಿಸುವ ರೀತಿಯಲ್ಲಿ ಚಿತ್ರಿಸದೆ ಸಂದೇಹ, ಗೊಂದಲಗಳನ್ನು ಉಳಿಸುತ್ತಾರೆ. ಅಂತ್ಯವನ್ನು ಕೂಡ ನಿರ್ಣಯಿಸುವ ಗೋಜಿಗೆ ಹೋಗದೆ, ಯಾವುದನ್ನೂ ಬಲವಾಗಿ ಪ್ರತಿಪಾದಿಸದೆ, ನೈತಿಕ ನೆಲಗಟ್ಟಿನಲ್ಲಿ ಸಾಮಾನ್ಯವಾಗಿ ನೆಲೆಯೂರಿರುವ ವಿಚಾರಗಳನ್ನು ನೇರವಾಗಿ ಹೇರದೆ ಪ್ರೇಕ್ಷಕರನ್ನೇ ಚಿಂತನೆಗೆ ಪ್ರೇರೇಪಿಸುತ್ತಾರೆ. ಅಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಪ್ರೇಕ್ಷಕ ತನ್ನನ್ನು ಕಲ್ಪಿಸಿಕೊಂಡು, ತಾನೇನು ಮಾಡಬಲ್ಲೆ ಎಂಬ ದ್ವಂದ್ವಕ್ಕೆ ಪ್ರೇರೆಪಿಸುವ ಇಂತಹ ಚಿತ್ರಣಗಳು ಅವರ ಸಿನಿಮಾಗಳಲ್ಲಿ ಕಾಣಸಿಗುತ್ತವೆ. ಹಾಗೆಯೇ ಒಂದು ನಾಟಕದ, ಒಂದು ಕತೆಯ ಸಂಕೀರ್ಣತೆಯನ್ನು, ಅದಕ್ಕೆ ಇರುವ ಹೆಚ್ಚೆಚ್ಚು ಆಯಾಮಗಳನ್ನು, ಆಳವನ್ನು ಫರ್ಹಾದಿ ಅವರ ಈ ವಿಶಿಷ್ಟ ಶೈಲಿ ತೆರೆಯ ಮೇಲೆ ಮೂಡಿಸಲು ಸಶಕ್ತವಾಗಿದೆ. ಇದಕ್ಕೆ ಕಾರಣ ಅವರು ನಗರ ಕೇಂದ್ರಿತ ಕತೆಗಳನ್ನು ಹೆಚ್ಚು ಆಯ್ಕೆ ಮಾಡಿಕೊಳ್ಳುವುದೂ ಇರಬಹುದು. ನಗರದ ಪರಿಕಲ್ಪನೆ ಬಹಳ ಸಂಕೀರ್ಣವಾದ ಸಂಗತಿ. ಇಲ್ಲಿ ವಾಸಿಸುವ ನಿವಾಸಿಗಳಿಗೆ ನಗರದ ಮೇಲೆ ಸಂಪೂರ್ಣ ನಿಯಂತ್ರಣ ಇರುವುದಿಲ್ಲ ಜೊತೆಗೆ ನಗರ ಸಾಮಾನ್ಯವಾಗಿ ನಿಗೂಢವಾಗಿಯೇ ಕಾಣಿಸಿಕೊಳ್ಳುತ್ತದೆ. ಇಂತಹ ನಿಗೂಢತೆ–ಸಂಕೀರ್ಣತೆ ಫರ್ಹಾದಿ ಅವರ ಸಿನಿಮಾಗಳಲ್ಲಿ ಹಾಗೆಯೇ ಅನುರಣನಗೊಳ್ಳುತ್ತವೆ. ಇದಕ್ಕಾಗಿ ಹಲವು ಪೂರಕ ಸಾಂದರ್ಭಿಕ, ಸಮಯೋಚಿತ ದೃಶ್ಯಗಳ ಸಂಯೋಜನೆ, ಮುಖ್ಯ ವಿಷಯಕ್ಕೆ ಸಂಬಂಧಿಸಿದಂತೆ ಆಡುತ್ತಿರುವ ಸಂಬಂಧಿತ ನಾಟಕವೊಂದನ್ನು ಕತೆಯಲ್ಲಿ ಬೆಸೆಯುವುದು, ಮತ್ತೊಂದು ಸಿನಿಮಾದ ಉಲ್ಲೇಖ ಮಾಡುವುದು – ಹೀಗೆ ಯಥೇಚ್ಛವಾಗಿ ಪರಿಕರಗಳನ್ನು ಬಳಸುವ ಫರ್ಹಾದಿ ಸಿನಿಮಾದ ರೂಢಿಗತ ಚೌಕಟ್ಟಿಗೆ ಸಿಲುಕಿಕೊಳ್ಳುವ ನಿರ್ದೇಶಕ ಅಲ್ಲ. ಇರಾನಿನ ಬಹುತೇಕ ಸಿನಿಮಾಗಳಲ್ಲಿ ಕಾಣಸಿಗುವ ಮಕ್ಕಳ ದೃಷ್ಟಿಕೋನದಲ್ಲಿ ಕತೆ–ಉಪಕತೆಗಳನ್ನು ಹೇಳುವ ಶೈಲಿ ಫರ್ಹಾದಿ ಅವರ ಸಿನಿಮಾಗಳಲ್ಲಿ ಕೂಡ ಕಾಣಸಿಗುತ್ತದೆ. 'ದ ಸೇಲ್ಸ್ ಮ್ಯಾನ್' ಚಿತ್ರದಲ್ಲಿ ನಾಟಕ ತಂಡದ ಸದಸ್ಯೆಯ ಮಗನೊಬ್ಬನ ಚಿತ್ರಣ ಅತಿ ಸಣ್ಣ ಸಮಯದಲ್ಲಿ ಕಂಡುಬಂದರೂ, ಆ ಮಗು ಬೇರೆಯಾಗುತ್ತಿರುವ ದಂಪತಿಯಲ್ಲಿ ಕೆಲವು ಕಾಲ ನಗುಮೂಡಿಸುವುದು, ಆ ದೃಶ್ಯದ ಪರಿಕಲ್ಪನೆ ಮತ್ತು ಚಿತ್ರಣ ಆಪ್ತವಾಗಿ ಮೂಡಿದೆ. ಎಮಾದ್ ಮತ್ತು ರಾಣ ವಾಸಿಸುವ ಮನೆಯ ಹಿಂದಿನ ಬಾಡಿಗೆದಾರ ಮಹಿಳೆಯ ಬಗ್ಗೆ ನೆರೆಹೊರೆಯವರು ಹತ್ತುಹಲವು ಕುಹಕ ಮಾತುಗಳನ್ನು ಆಡುವಂತೆ ಮಾಡಿದರೂ, ಅದರ ಬಗ್ಗೆ ನಿಖರವಾಗಿ ಏನನ್ನು ಸೂಚಿಸದೆ, ಯಾವುದೇ ಅನಗತ್ಯ ನೈತಿಕ ಹೊಣೆಗಾರಿಕೆಯನ್ನು ಪ್ರೇಕ್ಷಕರ ಮೇಲೆ ಹೇರದೆ ಆ ಭಾಗವನ್ನು ಬಹಳ ಮುಕ್ತವಾಗಿ ಪ್ರೇಕ್ಷಕರ ಮುಂದೆ ತೆರೆದಿಡುತ್ತಾರೆ.

ತಾಂತ್ರಿಕವಾಗಿ ಕೂಡ ಸಿನಿಮಾ ಅತ್ಯುತ್ತಮ ಮಟ್ಟವನ್ನು ಮುಟ್ಟುತ್ತದೆ. ನಗರ ಜೀವನದ ವೇಗಕ್ಕೆ ತಕ್ಕಂತೆ ವೇಗವಾಗಿ ಚಲಿಸುವ ಸಿನಿಮಾದಲ್ಲಿನ ಸಂಕಲನದ ಕುಶಲತೆ, ಸಿನಿಮಾದಲ್ಲಿ ತೊಡಗಿಸಿಕೊಳ್ಳುವ ಯುವಕರಿಗೆ, ನಗರ ಕೇಂದ್ರಿತ ನೈಜತೆಯ ಸಿನಿಮಾ ನಿರ್ದೇಶಿಸುವ ತುಡಿತವಿರುವವರಿಗೆ, ನಾಟಕದ ಶೈಲಿಯ ಸಿನಿಮಾ ನಿರ್ದೇಶಿಸುವ, ಬರೆಯುವ ಆಸಕ್ತರಿಗೆ ಇದು ಆಕರದಂತಿದೆ. ಪ್ರತಿ ಪಾತ್ರವೂ ಶಕ್ತಿಮೀರಿ ನಟಿಸಿರುವುದು ಸಿನಿಮಾವನ್ನು ಇನ್ನಷ್ಟು